# ಸಂಗೀತದಲ್ಲಿ ಸಾಹಿತ್ಯದ ಸ್ಥಾನ

## (ಕಾಂಚೀ ಪರಮಾಚಾರ್ಯರ ಒಂದು ವಿವರಣೆ)

ಸಂಗ್ರಹ – ಅನುವಾದ : **ಶಶಿಕಲಾ ಶ್ರೀಧರ್**



**ಕಾಂಚೀ ಪರಮಾಚಾರ್ಯರು**

ಕಾಂಚಿ ಕಾಮಕೋಟಿ ಪೀಠದ ೬೮ನೇ ಜಗದ್ಗುರುಗಳಾಗಿದ್ದ ಶ್ರೀ ಚಂದ್ರಶೇಖರ ಸರಸ್ವತೀ ಮಹಾಸ್ವಾಮಿಗಳು ಅಗಾಧ ಜ್ಞಾನಸಂಪನ್ನರೂ, ಮಹಿಮಾನ್ವಿತರೂ ಆಗಿದ್ದವರು. ಸಂಗೀತದಲ್ಲಿ ವಿಶೇಷ ತಿಳುವಳಿಕೆ ಹಾಗೂ ಆಸಕ್ತಿ ಹೊಂದಿದ್ದ ಅವರು ಅನೇಕ ಹಿರಿಯ ಸಂಗೀತ ವಿದ್ವಾಂಸರುಗಳಿಗೆ ಆಧ್ಯಾತ್ಮಿಕ ಗುರುಗಳಾಗಿದ್ದವರು. ಕರ್ನಾಟಕ ಸಂಗೀತ ಪ್ರಪಂಚದಲ್ಲಿ ದಿಗ್ಗಜರೆನಿಸಿಕೊಂಡ ಅರಿಯಾಕುಡಿ ರಾಮಾನುಜ ಅಯ್ಯಂಗಾರ್ ಅವರೊಂದಿಗೆ ಸ್ವಾಮೀಜಿ ನಡೆಸಿದ ಮಾತುಕತೆಯ ವಿವರಣೆ ತಮಿಳು ಮಾಸಪತ್ರಿಕೆ 'ಕಲ್ಕಿ'ಯ ೧೯೫೦ರ ದೀಪಾವಳಿ ವಿಶೇಷ ಸಂಚಿಕೆಯಲ್ಲಿ ಪ್ರಕಟವಾಗಿದ್ದು, ಆ ಲೇಖನದ ಆಂಗಲನುವಾದವನ್ನು ಆಧರಿಸಿದ ಕನ್ನಡ ಅವತರಣಿಕೆಯನ್ನು ಇಲ್ಲಿ ನೀಡುತ್ತಿದ್ದೇವೆ. ಇದನ್ನು ಸಂಗ್ರಹಿಸಿ, ಅನುವಾದಿಸಿ ಕೊಟ್ಟ ಲೇಖಕಿ ಬೆಂಗಳೂರು ರಾಮಕೃಷ್ಣ ಮಠದ ಭಕ್ತರು.

ತಮಿಳುನಾಡಿನ ಪುದುಕೋಟ್ಟೈ ಜಿಲ್ಲೆಯ ದೇವಕೋಟ್ಟೈ ಎಂಬ ಊರಿನಲ್ಲಿ ೧೯೬೧ರ ಜೂನ್ ತಿಂಗಳಲ್ಲಿ ಪರಮಾಚಾರ್ಯರು ಶಿಬಿರ ಹೂಡಿದ್ದ ಸಮಯ. ಹಲವು ವಾರಗಳಿಂದ ಅವರು ಗಾಢವಾದ ತಪಶ್ಚರ್ಯೆಯಲ್ಲಿದ್ದರು. ಪೂರ್ಣ ಮೌನ ವ್ರತದಲ್ಲಿದ್ದು ಸಂಜ್ಞೆಯ ಮೂಲಕವೂ ಏನನ್ನೂ ತಿಳಿಸುತ್ತಿರಲಿಲ್ಲ. ಭಕ್ತರ ಮಾತುಗಳೂ ಅವರ ಕಿವಿಗಳಿಗೆ ಬೀಳುತ್ತಿದ್ದವೋ ಇಲ್ಲವೋ ಎಂಬುದು ಬರುತ್ತಿರಲಿಲ್ಲ. ಒಂದು ದಿನ ಬೆಳಿಗ್ಗೆ ಸಮೀಪದ ಅರಿಯಕುಡಿ ನಗರ ವಾಸಿಗಳಾದ ಕೆಲವು ಭಕ್ತರು ದರ್ಶನಕ್ಕಾಗಿ ಬಂದಿದ್ದಾಗ ಅವರ ಮೂಲಕ ಕರ್ನಾಟಕ ಸಂಗೀತದ ಪ್ರಖ್ಯಾತ ಗಾಯಕರಾದ ಅರಿಯಕುಡಿ ರಾಮಾನುಜ ಅಯ್ಯಂಗಾರ್ಯರು ಕಾರೈಕುಡಿಗೆ ಆಗಮಿಸಿರುವ ಸಮಾಚಾರ ತಿಳಿದು ಬಂತು. ಪರಮಾಚಾರ್ಯರು ಒಡನೆಯೇ ಆ ಭಕ್ತರಿಗೆ ಅರಿಯಕುಡಿಯವರನ್ನು ಕರೆತಂದು ಅವರಿಗೆ ಭೇಟಿ ಮಾಡಿಸಲು ಕೈಸನ್ನೆಗಳಿಂದ ಕೇಳಿದಾಗ ಆ ಭಕ್ತರು ಒಡನೆಯೇ ಸಮ್ಮತಿಸಿ ಹೊರಟರು.

ಅಂದು ಮಧ್ಯಾಹ್ನ ಮೂರು ಘಂಟೆಗೆ ಸರಿಯಾಗಿ ಅರಿಯಕುಡಿ ಪರಮಾಚಾರ್ಯರ ಶಿಬಿರಕ್ಕೆ ಆಗಮಿಸಿದರು. ಕಾಷ್ಠಮೌನದಲ್ಲಿದ್ದ ಪರಮಾಚಾರ್ಯರನ್ನು ಭೇಟಿಯಾಗಲು ಬರಹೇಳಿದುದಕ್ಕೆ ಅರಿಯಕುಡಿಯವರು ಅತ್ಯಂತ ಭಾವುಕರೂ ಉದ್ವೇಗಭರಿತರೂ ಆಗಿದ್ದರು. ಸರಳತೆಯ ಸಾಕಾರವಾಗಿದ್ದ ಪರಮಾಚಾರ್ಯರ ಬಿಡಾರ ಅತ್ಯಂತ ಸರಳವಾದುದಾಗಿತ್ತು. ಅವರ ಕೋಣೆ ಒಂದು ಚಿಕ್ಕ ಮನೆಯ ತೋಟದ ಪಕ್ಕದಲ್ಲಿತ್ತು. ಆ ಕೋಣೆಯ ಒಂದು ಸಣ್ಣ ಕಿಟಕಿಯ ಮೂಲಕ ಭಕ್ತರು ಅವರ ದರ್ಶನವನ್ನು ಪಡೆಯಲು ಕಸ, ಪೊದೆಗಳ ಮೂಲಕ ಹಾದು ಬರಬೇಕಿತ್ತು. ಸುಖಭೋಗಗಳ ಜೀವನ ನಡೆಸುವವರನ್ನು ಪರಮಾಚಾರ್ಯರು ಎಚ್ಚರಿಸಿ ಮಾರ್ಗದರ್ಶನ ಮಾಡುವ ಪರಿ ಇದಾಗಿರಬಹುದೆ? ಅರಿಯಕುಡಿಯವರಿಗೆ ಹಿಂಬಾಗದ ಕಿಟಕಿಯ ಬಳಿ ಕರೆತರಲು ಸಂಜ್ಞೆಮಾಡಿ ಸೂಚಿಸಿದರು. ಅರಿಯಕುಡಿಯವರು ಆಗಮಿಸಿ ಪರಮಾಚಾರ್ಯರಿಗೆ ಸಾಷ್ಟಾಂಗ ನಮಸ್ಕಾರ ಮಾಡುವುದರ ಮೂಲಕ ತಮ್ಮ ಭಕ್ತಿಗೌರವಗಳನ್ನು ತೋರಿದರು. ಒಡನೆಯೇ ಅಲ್ಲಿದ್ದವರೆಲ್ಲರಿಗೂ ಹರ್ಷವಾಗುವಂತೆ ಪರಮಾಚಾರ್ಯರು ತಮ್ಮ ಕಾಷ್ಠಮೌನವನ್ನು ಮುರಿದು ನಿರರ್ಗಳವಾಗಿ ಮಾತನಾಡಲು ಪ್ರಾರಂಭಿಸಿದರು :

**ಪರಮಾಚಾರ್ಯರು:** ''ನೀವು 'ರಾಷ್ಟ್ರಪತಿ ಪ್ರಶಸ್ತಿ' ಯನ್ನು ಪಡೆದುದು ತಿಳಿದು ಬಂದಿತು. ಕೆಂಪು ಕಾಲುಹಾಸಿನ ಮೇಲೆ ನಡೆದು ಬಂದು ಅನೇಕ ಗಣ್ಯರೆದುರು ನೀವು ಆದನ್ನು ಸ್ವೀಕರಿಸಿರುತ್ತೀರಿ. ಇಲ್ಲಿ ನಾವಾದರೋ ನಿಮಗೆ ಕಲ್ಲು ಮುಳ್ಳುಗಳ



**ಅರಿಯಾಕುಡಿ ರಾಮಾನುಜ ಅಯ್ಯಂಗಾರ್**

ಮೇಲೆ ನಡೆದು ಬಂದು ಇಕ್ಕಟ್ಟಿನ ಕೊಠಡಿಯಲ್ಲಿ ಕುಳಿತುಕೊಳ್ಳುವಂತೆ ಮಾಡಿದೆವು. ನಾವು ನಿಮ್ಮನ್ನು ಕರೆದ ಉದ್ದೇಶ, ನಾವು ಬಹಳ ದಿನಗಳಿಂದ ದೀಕ್ಷಿತರ 'ಶ್ರೀ ಸುಬ್ರಹ್ಮಣ್ಯಾಯ ನಮಸ್ತೇ' ಕೀರ್ತನೆಯನ್ನು ಶುದ್ಧವಾಗಿ ಹಾಡಿರುವುದನ್ನು ಕೇಳಬೇಕೆಂಬ ಇಚ್ಛೆಯುಳ್ಳವರಾಗಿದ್ದೆವು. ನೀವು ಸಮೀಪದಲ್ಲೇ ಬಂದಿಳಿದಿರುವ ವಿಷಯ ತಿಳಿಯುತ್ತಲೇ ಈ ಇಚ್ಛೆ ಪ್ರಬಲವಾಯಿತು. ಶುದ್ಧವಾದ, ಪೂರ್ಣವಾದ ಹಾಡುಗಾರಿಕೆ ಎಂದರೆ ಸಂಗೀತ ಹಾಗೂ ಸಾಹಿತ್ಯದ ಸಮರ್ಪಕ ಸಮಾಗಮ. ಕೆಲವರು ಕೀರ್ತನೆಗಳ ಸಂಸ್ಕೃತ ಅಥವಾ ತೆಲುಗು ಸಾಹಿತ್ಯವನ್ನು ಎಷ್ಟರಮಟ್ಟಿಗೆ ವಿರೂಪಗೊಳಿಸುತ್ತಾರೆ ಎಂದರೆ ಅವರು ಹಾಡದೆ ಇರುವುದೇ ಒಳ್ಳೆಯದೆಂದು ನಮಗೆ ಅನ್ನಿಸಿಬಿಡುವುದು. ಸ್ವರ, ಲಯ ಮತ್ತು ಸಾಹಿತ್ಯ ಛಂದಸ್ಸು ಇವುಗಳು ಅನೇಕ ಕೀರ್ತನೆಗಳಿಗೆ ಕೊಡಲ್ಪಟ್ಟಿರುತ್ತದೆ. ಪದಗಳ ಜೋಡನೆ ಮತ್ತು ವಿಭಜನೆಗಳೂ ಕೊಡಲ್ಪಟ್ಟಿರುತ್ತದೆ. ಸಂಗೀತಗಾರನಾದವನು ಸ್ವರ, ಲಯ ಮತ್ತು ಛಂದಸ್ಸುಗಳನ್ನು ಒಂದುಗೂಡಿಸಿ ಸಾಹಿತ್ಯದ ಶಬ್ದಗಳ ಜೋಡನೆ ಮತ್ತು ವಿಭಜನೆಯನ್ನು ಸರಿಯಾದ ರೀತಿಯಲ್ಲಿ , ಅರ್ಥವು ಕೆಡದಂತೆ ಮಾಡಿ ಹಾಡಲು ಜಾಗ್ರತೆ ವಹಿಸಬೇಕು. ಉತ್ತಮ ರಚನಕಾರರ ರಚನೆಗಳಲ್ಲಿ ಈ ಶಬ್ದಗಳನ್ನು ಅರ್ಥಬರುವಂತೆ ಬಿಡಿಸಿ ಹಾಡಲು ಖಂಡಿತವಾಗಿಯೂ ಸಾಧ್ಯವಿದೆ. ಆದರೆ ಅನೇಕ ಗಾಯಕರು ಸ್ವರ ಮತ್ತು ಲಯಗಳ ಮೇಲೆ ಗಮನ ಹರಿಸಿ ಸಾಹಿತ್ಯದ ಅರ್ಥವನ್ನು ಕಡೆಗಣಿಸುತ್ತಾರೆ. ಹಲವು ಬಾರಿ ಅಸಂಬದ್ಧ ಅರ್ಥಬರುವಂತೆಯೂ ಹಾಡುತ್ತಾರೆ. ಈ 'ಸುಬ್ರಹ್ಮಣ್ಯಾಯ ನಮಸ್ತೇ' ಎಂಬ ಕೀರ್ತನೆಯಲ್ಲಿ ಒಂದು ಸಾಲು ಹೀಗಿದೆ: 'ಗುರುಗುಹಾಯಾಜ್ಞಾನಧ್ವಾಂತಸವಿತ್ರೇ' ಅಜ್ಞಾನ ಎಂಬ ಅಂಧಕಾರಕ್ಕೆ ಸೂರ್ಯನಂತೆ ಎಂದರ್ಥ. ಕೆಲವರು ಈ ಸಾಲನ್ನು 'ಗುರುಗುಹಾಯಾ ಜ್ಞಾನಧ್ವಾಂತ ಸವಿತ್ರೇ' ಜ್ಞಾನದ ಅಂಧಕಾರವನ್ನು ನಿವಾರಿಸುವ ಸೂರ್ಯ ಎಂದು ಹಾಡುತ್ತಾರೆ! ಇದರಂತೆಯೇ ಶ್ರೀ ಸುಬ್ಬರಾಮ ದೀಕ್ಷಿತರ ಶಂಕರಾಭರಣ ರಾಗದ 'ಶಂಕರಾಚಾರ್ಯಂ' ಎಂಬ ಇನ್ನೊಂದು ಕೃತಿ ಇದೆ. ಇದನ್ನು ನೀವೂ ಹಾಡಬಹುದು. ವೀಣೆ ಧನಮ್ಮರವರ ಕುಟುಂಬ, ಸೆಮ್ಮಂಗುಡಿ ಸೀನು (ಶ್ರೀನಿವಾಸ ಅಯ್ಯರ್) ಎಮ್.ಎಸ್.ಎಸ್ (ಎಂ. ಎಸ್. ಸುಬ್ಬುಲಕ್ಷ್ಮೀ) ಇದನ್ನು ಹಾಡುತ್ತಾರೆ. ಈ ಕೃತಿಯಲ್ಲಿ 'ಪರಮಾದ್ವೈತ ಸ್ಥಾಪನ ಲೀಲಮ್' ಎಂಬ ಒಂದು ಸಾಲಿದೆ. ಅತ್ಯಂತ ಸುಲಭವಾಗಿ, ಆಟವಾಡಿದಷ್ಟು ಸುಲಭವಾಗಿ ಅದ್ವೈತ ತತ್ತ್ವವನ್ನು ಸ್ಥಾಪಿಸಿದ ಶಂಕರರು ಎಂಬುದು ಇದರ ಅರ್ಥ. ( ಇದನ್ನು ಹಾಡಿ ತೋರಿಸುತ್ತಾ) ಇದರಲ್ಲಿ ಅದ್ವೈತ ಎಂಬ ಶಬ್ದದ **ಅ** ಅಕ್ಷರವನ್ನು ಒತ್ತಿ ಹಾಡಿದರೆ ಮಾತ್ರ ಅದು ಉದ್ದೇಶಿತ ಅರ್ಥವನ್ನು ಕೊಡುತ್ತದೆ. ನಾವು ನಿಜವಾಗಿ ಲಕ್ಷ್ಯ ಕೊಟ್ಟು ಹಾಡಿದರೆ ಯಾವ ಪ್ರಯತ್ನವೂ ಇಲ್ಲದೆ ಸರಿಯಾದ ಅರ್ಥ ಬರುವಂತೆ ಹಾಡಬಹುದು. ಮೇಲೆ ಹೇಳಿದ ಗಾಯಕರು ಅರ್ಥವನ್ನು ಕೆಡಿಸದೆ ಸರಿಯಾಗಿ ಹಾಡುತ್ತಾರೆ. ಇದಕ್ಕೆ ಲಕ್ಷ್ಯ ಕೊಡದವರು 'ಪರಮಾ' ಎಂಬ ಶಬ್ದವನ್ನು ಎಳೆದು ಅನಂತರ 'ದ್ವೈತ ಸ್ಥಾಪನ ಲೀಲಮ್' ಎಂದು ಹಾಡುತ್ತಾ ಅದ್ವೈತ ಆಚಾರ್ಯನನ್ನು ದ್ವೈತ ಆಚಾರ್ಯನನ್ನಾಗಿ ಪರಿವರ್ತಿಸಿಬಿಡುತ್ತಾರೆ (ಮುಕ್ತವಾಗಿ ನಗುತ್ತಾರೆ). ಸಂಗೀತದಲ್ಲಿ ದ್ವೈತ ಅದ್ವೈತ ಎಂಬ ಭೇದವಿಲ್ಲ. ಸಂಗೀತ ಮಾತ್ರ ಮುಖ್ಯ. ಸಂಗೀತವು ಹಾಡುಗಾರನ ಮನಸ್ಸನ್ನು ಹಾಡಿನಲ್ಲಿ ಕೀರ್ತಿಸಲ್ಪಟ್ಟಿರುವ ದೇವರಲ್ಲಿ ಏಕೀಕರಣಗೊಳಿಸುತ್ತದೆ. ನೀವು ಈ ಕೀರ್ತನೆಯನ್ನು ಹಾಡುವುದನ್ನು ನಾವು ಕೇಳಿ ಬಲ್ಲೆವು. ನಿಮ್ಮ ಸಂಗೀತದ ಸಾಮರ್ಥ್ಯದ ಬಗ್ಗೆ ನಾವು ಹೇಳಬೇಕಾದುದು ಏನೂ ಇಲ್ಲ. ಸಾಹಿತ್ಯದ ಭಾಗವನ್ನು ನೀವು ಸರಿಯಾಗಿ ಹಾಡುವಿರಿ. ಆದ್ದರಿಂದಲೇ ನಾವು ನಿಮ್ಮನ್ನು ಇಲ್ಲಿಗೆ ಕರೆಸಿದುದು.

''ನನ್ನ ಈ ದರ್ಬಾರಿನಲ್ಲಿ ಬರೀ ಕಲ್ಲುಮುಳ್ಳುಗಳು ಇವೆ. ಪಕ್ಕವಾದ್ಯಗಳಿಲ್ಲ. ತಂಬೂರಿಯ ಶ್ರುತಿಯೂ ಇಲ್ಲ. ಇಷ್ಟೆಲ್ಲ ಅನಾನುಕೂಲಗಳಿದ್ದರೂ ದಯವಿಟ್ಟು ನನಗಾಗಿ ಈ ಕೃತಿಯನ್ನು ಹಾಡಿ.''

ಅರಿಯಕುಡಿಯವರು 'ಶ್ರೀ ಸುಬ್ರಹ್ಮಣ್ಯಾಯ ನಮಸ್ತೇ' ಎಂಬ ಮುತ್ತುಸ್ವಾಮಿ ದೀಕ್ಷಿತರ ಕೀರ್ತನೆಯನ್ನು ಅದ್ಭುತವಾಗಿ ಹಾಡಿದರು. ಅದೊಂದು ಅಪರೂಪದ ಸಂಗೀತ ರಸದೌತಣವಾಗಿತ್ತು. ಪಕ್ಕವಾದ್ಯಗಳಾವುವೂ ಇಲ್ಲದಿದ್ದರೂ ಸಂಗೀತ ಪೂರ್ಣವಾಗಿ ಹೊರಹೊಮ್ಮಿತು. ಪರಮಾಚಾರ್ಯರು ಕಣ್ಣುಗಳನ್ನು ಮುಚ್ಚಿಕೊಂಡು ಪೂರ್ಣ ಏಕಾಗ್ರತೆಯಿಂದ ಆಲಿಸಿದರು. ❇

### ಸಂಗೀತದ ಪ್ರವರ್ತಕನಾರು?

**ಸಂಸಾರದುಃಖದಗ್ಧಾನಾಂ ಉತ್ತಮಾನಾಮನುಗ್ರಹಾತ್ ।**
**ಪ್ರಭುಣಾ ಶಂಕರೇಣಾತ್ರ ಗೀತವಿದ್ಯಾ ಪ್ರಕಾಶಿತಾ ॥**

'ಸಂಸಾರದುಃಖದಿಂದ ದಗ್ಧರಾಗಿರುವ ಉತ್ತಮರ ಅನುಗ್ರಹಕ್ಕಾಗಿ ಭಗವಾನ್ ಶಂಕರನು ಸಂಗೀತ ವಿದ್ಯೆಯನ್ನು ಪ್ರಕಾಶಪಡಿಸಿರುವನು.'

*— ಶ್ರೀ ವಿದ್ಯಾರಣ್ಯರ **'ಸಂಗೀತಸಾರ.'***